MVC No.193/2023 PW-1

**<u>ದಿನಾಂಕ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ</u>**

ನಾನು ಬಿಕಾಂ ಓದಿರುತ್ತೇನೆ. ನಾನು ಬೆಂಗಳೂರು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಈಗ ಕೆಲಸ ಮಾಡುತ್ತಿಲ್ಲ. ಕಂಪನಿಯವರನ್ನು ಸಾಕ್ಷಿ ಮಾಡಿಸಲು ಅವರು ಬರುವುದಿಲ್ಲ. ರಿಲೀವಿಂಗ್ ಲೆಟರ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸುಳ್ಳು. ಅಪಘಾತವಾದ ದಿನ ಬೈಕ್ ನಲ್ಲಿ ಮೈಸೂರು ಕಡೆಗೆ ನನ್ನ ಸ್ನೇಹಿತನ ಜೊತೆ ಹೋಗುತ್ತಾ ಇದ್ದೆ. ನನಗೆ ಅಪಘಾತ ಪಡಿಸಿದ ವಾಹನ ಮೈಸೂರು ಕಡೆಗೆ ಹೋಗುತ್ತಾ ಇತ್ತು. ನಾನು ಸದರಿ ವಾಹನದ ಹಿಂದೆ ಇದ್ದೆ. ನಾನು National ಹೆದ್ದಾರಿಯಲ್ಲಿ ಹೋಗುತ್ತಾ ಇದ್ದೆ. ಸದರಿ ರಸ್ತೆಯಲ್ಲಿ ದ್ವಿಚಕ್ರ ವಾಹನ ಹೋಗಲು ಅನುಮತಿ ಇಲ್ಲ ಎಂದರೆ ಸಾಕ್ಷಿಯು ಆಗ ಇತ್ತು ಎಂದು ನುಡಿಯುತ್ತಾರೆ. ನಾನು ರಸ್ತೆಯ ಎಡಬದಿಯಲ್ಲಿ Emergency ರಸ್ತೆಯಲ್ಲಿ ಹೋಗುತ್ತಿದ್ದೆ. ಮುಂದೆ ಹೋಗುತ್ತಿದ್ದ ವಾಹನ ಬಲಗಡೆಯಿಂದ ಎಡಗಡೆಗೆ ಬಂದಿರುತ್ತದೆ. ಮುಂದೆ ಹೋಗುತ್ತಿದ್ದ ವಾಹನ ಅದರ ಲೈನ್ ನಲ್ಲಿ ಹೋಗುತ್ತಾ ಇತ್ತು ಎಂದರೆ ಸುಳ್ಳು. ನಾನೇ ಮುಂದೆ ಹೋಗುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿಕೊಂಡಿರುತ್ತೇನೆಂದರೆ ಸುಳ್ಳು. ಮುಂದೆ ಹೋಗುತ್ತಿದ್ದ ವಾಹನ ಅಪಘಾತವಾದ ನಂತರ ಅಲ್ಲೇ ನಿಲ್ಲಿಸಿತು. ಅಪಘಾತವನ್ನು ಬೇರೆಯವರು ನೋಡಲು ಯಾರೂ ಇರಲಿಲ್ಲ. ನನ್ನನ್ನು ಯಾವುದೋ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ನಾನು ಮತ್ತು ನನ್ನ ಜೊತೆಗೆ ಬರುತ್ತಿದ್ದ ಪಲ್ಲವಿರವರು ಅಪಘಾತದ ಬಗ್ಗೆ ಮಾಹಿತಿಯನ್ನು ನೀಡಿರುತ್ತೇವೆ. ನಾನು ಭರತ್ ಕೆಂಪಣ್ಣ ಆಸ್ಪತ್ರೆಗೆ ಹೋಗಿರುತ್ತೇವೆ. ಎಂ ಎಲ್ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಹೇಳಿಕೆಯಂತೆ ಭರತ್ ಕೆಂಪಣ್ಣ ಆಸ್ಪತ್ರೆಯಲ್ಲಿ ನನ್ನನ್ನು ದಾಖಲು ಮಾಡಿಕೊಂಡಿರುತ್ತಾರೆ. ವಕೀಲರು ಎಂ ಎಲ್ ಸಿ ಯನ್ನು ತೋರಿಸಿದಾಗ ಸಾಕ್ಷಿಯು ತಿರಸ್ಕರಿಸುತ್ತಾರೆ. ಸದರಿ ಎಂ ಎಲ್ ಸಿ ಯ ಪ್ರಕಾರ Skid and fall ಎಂದು ನಮೂದು ಮಾಡಿರುತ್ತಾರೆಂದರೆ ಸುಳ್ಳು. ಪಲ್ಲವಿಯವರೂ ಸಹ ಭರತ್ ಕೆಂಪಣ್ಣ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ

ನಿಜ. ಘಟನಾ ದಿನ ದೂರು ನೀಡಲು ನಾನು ಆಸ್ಪತ್ರೆಗೆ ದಾಖಲಾಗಿದ್ದೆ. ಮರುದಿನ ದೂರು ನೀಡಲು ನನ್ನ ಪರಿಸ್ಥಿತಿ ಸರಿಯಿರಲಿಲ್ಲ. ನನ್ನ ತಾಯಿ 8 ದಿನಗಳ ನಂತರ ದೂರು ನೀಡಿರುತ್ತಾರೆ. ಸದರಿ ದೂರಿನಲ್ಲಿ ಅಪಘಾತ ಪಡಿಸಿದ ವಾಹನ ಹೊರಟು ಹೋಯಿತು ಎಂದು ಬರೆಸಿರುತ್ತಾರೆಂದರೆ ಸುಳ್ಳು. ನನಗೆ ಅಪಘಾತ ಪಡಿಸಿದ ವಾಹನ ಚಾಲಕ ಪರಿಚಯವಿಲ್ಲ. ನಮ್ಮನ್ನು ಆಸ್ಪತ್ರೆಗೆ ಸೇರಿಸಿದವರನ್ನು ಸಾಕ್ಷಿ ಮಾಡಿಸಲು ಆಗುವುದಿಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಾನು ಆಸ್ಪತ್ರೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನಗೆ ಚಿಕಿತ್ಸೆ ನೀಡಿದ ವೈಧ್ಯಾಧಿಕಾರಿಯವರಿಂದ ಸಾಕ್ಷಿ ನುಡಿಸುತ್ತೇನೆ. ನನಗೆ ಅಪಘಾತವಾಗುವುದಕ್ಕಿಂತ ಮುಂಚೆ ನಾನು ಕೆಲಸ ಮಾಡಿ ತಿಂಗಳಿಗೆ 27 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನಗೆ ಯಾವುದೇ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲವೆಂದರೆ ಸುಳ್ಳು.ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಾನು ಈಗಲೂ ಕೆಲಸ ಮಾಡುತ್ತಿದ್ದರೂ ಸುಳ್ಳುಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಅಪಘಾತವಾಗುವ ಸಮಯದಲ್ಲಿ ನನ್ನ ಬ್ಯಾಂಕ್ ಖಾತೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಜಪಡಿಸಲು ತೊಂದರೆ ಇಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**